ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ನೋಟಿಫಿಕೇಷನ್ ನಂ. 259—C. S. ಬೆಂಗಳೂರು, ತಾರೀಖು 5ನೆ ಡಿಸೆಂಬರ್ 1907.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಯು 1905ನೆ ಇಸವಿಯ ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ (2) ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತೆ.

ಹೆಸರು.	ಸ್ಥಳ.	ರಿಜಿಸ್ಟರು ಆದ ತಾರೀಖು.
ಗುಂಡ್ಲಪೇಟೆ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್.	ಗುಂಡ್ಲಪೇಟೆ ...	ಡಿಸೆಂಬರು 4, 1907.

ಎಂ. ರಾಮರಾವ್,
ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.

ನೋ ಟಿ ಸ್

ತೀರ್ಥಹಳ್ಳಿ, ತಾರೀಖು 9ನೆ ನವಂಬರು 1907.

ಈ ಕೆಳಗೆ ರುಜು ಮಾಡಿದ ತೀರ್ಥಹಳ್ಳೀ ಜವಳಿ ರಘುಪತಯ್ಯನವರ ಮಗ ಹನುಮಂತರಾಯನು ಇದರಿಂದ ಸಮಸ್ತ ಜನಗಳಿಗೂ ಕೃತಪಡಿಸುವದೇನಂದರೆ :—

1. ತೀರ್ಥಹಳ್ಳೀ ಜವಳಿ ಕೃಷ್ಣಯ್ಯನವರ ಮಕ್ಕಳು ವಿಠಲೈಯ್ಯನವರು ಮತ್ತು ಜವಳಿ ಸುಬ್ಬಾಯರ ಮಕ್ಕಳು ಮಂಜಪ್ಪನವರು ಸಹಾ ನಮ್ಮ ಮೈನಾರಿಟಿ ಕಾಲದಾರಭ್ಯ ನಮ್ಮ ಜನಕತಂದೆ ರಘುಪತಯ್ಯನವರಿಗೆ ಸ್ವಾರ್ಜಿತವಾಗಿಯು ನಮಗೆ ಪಿತರಾರ್ಜಿತವಾಗಿಯೂ ಇರುವ ಮೈವಟ್ಟಿನ ಆಡಳಿತ ನೋಡುತ್ತಾ ಇದ್ದರು. ಈ ಪೈಕಿ ವಿಠಲೈಯ್ಯನವರು ಈಚೆಗೆ ಮೃತಪಟ್ಟಿದ್ದಾರೆ.

2. ಈ ವಿಠಲೈಯ್ಯನವರು ಮತ್ತು ಈ ಮಂಜಪ್ಪನವರು ಇವರುಗಳ ಒಟ್ಟಿನ ಅಥವಾ ಇವರುಗಳ ಪೈಕಿ ಯಾರೊಬ್ಬರ ಹೆಸರಿಗೆ ಆಗಲೀ, ವ ಜವಳಿ ಕೇಷಗಿರಿಯಪ್ಪನವರು ಬಿ ರಘುಪತಯ್ಯನವರು ಮತ್ತು ಈ ಕೇಷಗಿರಿಯಪ್ಪನವರ ತಮ್ಮ ಹನುಮಂತರಾಯನಾದ ನಾನು ಈರೀತಿ ಇರುವ ನಮ್ಮ ಒಟ್ಟಿನ ಅಥವಾ ನಮ್ಮ ಪೈಕಿ ಯಾರೊಬ್ಬರ ಹೆಸರಿಗೆ ಆಗಲಿ, ಕ್ರಯವಾಗಿರತಕ್ಕ ಆಸ್ತಿಗಳು ಮತ್ತು ಇವುಗಳಿಂದ ಸಂಪಾದಿಸಲು ಬರತಕ್ಕ ಗುತ್ತಿಗೆ ಆಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯು, ಮತ್ತು ಭೋಗ್ಯಾಧಾರ ವ ದೃಷ್ಟಾಧಾರ ವ ಮೈನಾಲ ಪತ್ರ ಅಥವಾ ಪತ್ರಗಳ ಮತ್ತು ಪ್ರೊನೋಟ್ ಅಥವಾ ಪ್ರೊನೋಟುಗಳ ವಗೈರೆ ಡಾಕ್ಯುಮೆಂಟುಗಳ ಬಾಬತು ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯು, ಮತ್ತು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಮತ್ತು ಸ್ಯ 1903-07ನೆ ಸೇಕಡಾ ರ.ವೈ ಮೈಸೂರ್ ಸ್ಟೇಟ್ ಲೋನ್ ಪ್ರೊನೋಟುಗಳ ಬಾಬತು ಇವರುಗಳ ಮತ್ತು ನಮ್ಮ ಮತ್ತು ನಮ್ಮ ಮಕ್ಕಳು ಮೈನರರು ಗಾರ್ಡಿಯ್ಯ ನಾವು ಈ ರೀತಿ ಬರತಕ್ಕ ಅಸಲು ಹಣ ಮತ್ತು ಇದರ ಬಡ್ಡಿಯು ಸಹಾ ಮೇಲ್ಕಂಡ ನಮ್ಮ ಮೈವಟ್ಟಿಗೆ ಸಮ್ಬಂಧಪಟ್ಟದ್ದಾಗಿ ನನಗೆ ಬರತಕ್ಕದ್ದಾಗಿರುತ್ತದೆ.

3. ಇದರಲ್ಲಿ ಈ ವಿಠಲೈಯ್ಯನವರಿಗೆ ಆಗಲಿ, ಈ ಮಂಜಪ್ಪನವರಿಗಾಗಲಿ ಅಥವಾ ಈ ವಿಠಲೈಯನವರ ತಮ್ಮ ಕ್ರೀಪತಿರಾಯರ ಮಕ್ಕಳು 1ನೆ ರಂಗರಾವ್, 2ನೆ ಬಾಲಕೃಷ್ಣರಾವ್, 3ನೆ ಆನಂದರಾವ್, 4ನೆ ವಾಮನರಾವ್, —4 ಮೈನರು, ಗಾರ್ಡಿಯ್ಯ 1ನೆ ರಂಗರಾವ್ ಮತ್ತು ಈ ಮಂಜಪ್ಪನವರ ತಮ್ಮಂದಿರು 5ನೆ ಪಾಂಡುರಂಗಪ್ಪನವರು, 6ನೆ ರಾಮರಾಯರು, 7ನೆ ನಾಗೇಶರಾವ್ ಫಲಪತಿ ಮಗ ಭಾಸ ರರಾವ್ ಮೈನರ್, ಗಾರ್ಡಿಯ್ಯ ಮಂಜಪ್ಪನವರು, 8ನೆ ಗೋಪಾಲರಾವ್ ಬಿ ಪಾಂಡುರಂಗಪ್ಪನವರು, 9ನೆ ಇವರ ತಮ್ಮ ಮೂಡ್ಲಗಿರಿಯಪ್ಪನವರು, 10ನೆ ಮಾಧವರಾವ್ ಬಿ ರಾಮರಾಯರು ಇವರುಗಳಿಗೇ ಆಗಲಿ ಹಕ್ಕು ಬಾಧ್ಯತೆ ಇರುವದಿಲ್ಲಾ.

4. ಈ ವಿಠಲೈಯನವರು ಮತ್ತು ಈ ಮಂಜಪ್ಪನವರು ಈಚೆಗೆ ಈ ಮಂಜಪ್ಪನವರು ಮೇಲೆ ಕಂಡ ಇವರ ತಮ್ಮಂದಿರ ಮಕ್ಕಳ ಮತ್ತು ತಮ್ಮಂದಿರ ಸಾಲಗಳಿಗೆ ಈ ನಮ್ಮ ಮೈವಟ್ಟಿನ ಆಸ್ತಿಯನ್ನು ಗುರಿಪಡಿಸಿದ್ದು ಇದರ ಆಸ್ತಿಗಳಿಗೆ ಲೋಪ ಪಡಿಸಿದ್ದು ಮತ್ತು ಇನ್ನೂ ಲೋಪ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ಇನ್ನೂ ಕೆಲವು ಸಂಗತಿಗಳಲ್ಲಿ ನನಗೆ ಮೋಸ ವಿರ್ಬಂಧಪಡಿಸಿದ್ದೂ ಮತ್ತು ಇನ್ನೂ ಮೋಸ ವಗೈರೆ ಪಡಿಸುವದಕ್ಕೆ ಪ್ರಯತ್ನಿಸುವದೂ, ವಗೈರ ಅನೇಕ ವಿಧವಾದ ಈ ಮೈವಟ್ಟಿಗೂ ಇದರ ಹಕ್ಕುದಾರರಾದ ನಮಗೂ ನಮ್ಮ ಪ್ರತಿನಿಧಿಯವರಿಗೂ ವಿರೋಧವಾದ ವಿದ್ಯಮಾನಗಳು ನಡಿಸಿದ್ದೂ ಮತ್ತು ಇನ್ನೂ ನಡಸುವದಕ್ಕೆ ಪ್ರಯತ್ನಿಸುವದೂ ವಗೈರೆ ನನ್ನ ನೋಟೀಸಿಗೆ ಬಂದಿರುವದರಿಂದ ನಾನು ಇವರ ಆಡಳಿತವನ್ನು ವಜಾ ಮಾಡಿದ್ದೇನೆ.

5. ಮೇಲೆ 2ನೆ ಕಲಂನಲ್ಲಿ ಕಂಡ ಹೆಸರುಗಳಿಗೆ ಕ್ರಯವಾಗಿರತಕ್ಕ ಆಸ್ತಿಗಳ ಬಾಬತು ಗುತ್ತಿಗೆ ಆಡಿಕೆ, ಗಡಿಭತ್ತ, ನಗದು ಗೇಣಿ ವ ಕಿಸ್ತು ವಗೈರೆಯನ್ನು ಮತ್ತು ಭೋಗ್ಯಾಧಾರ ವಗೈರೆ ಡಾಕ್ಯುಮೆಂಟುಗಳ ಸಮ್ಬಂಧ ಅಸಲು ಹಣ ಇದರ ಬಡ್ಡಿ ವ ಬಡ್ಡಿಯ ಬಡ್ಡಿಯನ್ನೂ ಈ ಮುಂತಾದ್ದು ವಗೈರೆ ಎಷ್ಟನ್ನಾದರೂ ಮೇಲೆ 3ನೆ ಕಲಂಮಿನಲ್ಲಿ ನಮೂದಿಸಿದ ಈ ಮೈವಟ್ಟಿಗೆ ಹಕ್ಕುದಾರರಲ್ಲದವರ ಕಡಿಗೆ ವಸೂಲು ಕೊಡಕೂಡದು. ಕೊಟ್ಟರೆ ನಮ್ಮ ಮೈವಟ್ಟಿಗೆ ವ ನನಗೆ ಬಂದಂತೆ ನಾನು ಒಪ್ಪಿಕೊಳ್ಳುವದಿಲ್ಲಾ. ಮೇಲ್ಕಂಡ ಪತ್ರಗಳು ವಗೈರೆ ಇವರು ಇದರ ಆಡಳಿತ ನೋಡುತ್ತಾ ಇರುವಾಗ್ಗೆ ಇವರ ಹೆಸರಿಗೆ ನಾಮಪ್ರತಿ ಹುಟ್ಟಿದ್ದಾಗಿರುತ್ತವೆ. ಈ ಮೇಲೆ ಕಂಡ ಆಸ್ತಿಗಳ ಪೈಕಿ ಅಥವಾ ಡಾಕ್ಯುಮೆಂಟುಗಳ ಪೈಕಿ ಎಷ್ಟನ್ನಾದರೂ ಈ ಮೈವಟ್ಟಿಗೆ ಹಕ್ಕುದಾರರಲ್ಲದ ಮೇಲೆ ವಿವರಿಸಿದ ಈ ಮಂಜಪ್ಪನವರು ವಗೈರೇರ ಪೈಕಿ ಯಾರಿಂದಲೇ ಆಗಲಿ ಕ್ರಯ ಪರಿವರ್ತನಾ ಮೂಲಕ ಯಾರಾದರೂ ಪಡಕೊಂಡರೆ ಆಗಲಿ ಮೇಡೂರು ವಗೈರೆ ಮೂಲಕ ಪರಭಾರೆ ಪಡಕೊಂಡರೆ ಆಗಲಿ ಅದಕ್ಕೆ ನಾನು ಒಪ್ಪಿಕೊಳ್ಳುವದಿಲ್ಲ ಮತ್ತು ಹಾಂಗೆ ಪಡಕೊಂಡವರ ಕಡಿಗೆ ಎಷ್ಟನ್ನಾದರೂ ವಸೂಲು ಕೊಟ್ಟಾಗ್ಯೂ ಅದನ್ನು ನಾನು ಒಪ್ಪಿಕೊಳ್ಳುವದಿಲ್ಲ ಎಂಬುವದನ್ನು ತಿಳಿದಿರತಕ್ಕದ್ದು. ಇವರುಗಳು ಮತ್ತು ನಾವು ಸಹಾ ಬಂದೇ ಮನೆಯಲ್ಲಿ ವಾಸವಾಗಿದ್ದಾಗ್ಯೂ ಈ ಮೈವಟ್ಟಿನಲ್ಲಿ ಇವರಿಗೆಗಳಿಗೆ ಏನೂ ಹಕ್ಕು ಇರುವದಿಲ್ಲಾ ಎಂಬುವದನ್ನು ಸಹಾ ತಿಳಿದಿರತಕ್ಕದ್ದು.

ತೀರ್ಥಹಳ್ಳೀ ಜವಳಿ ಹನುಮಂತರಾಯನ ರುಜು.